ಕೇಂದ್ರ ಸರ್ಕಾರದ ಒಂದು DIET ಎಂದು ಒಂದು ಯೋಜನೆ ಇದೆ. ಪ್ರತಿ ಜಿಲ್ಲೆಗೆ ಒಂದೊಂದು ಕೋಟಿ ರೂಪಾಯಿಯನ್ನು ಈ ರೀತಿಯಲ್ಲಿ ಶಿಕ್ಷಕರ ಮಾನವ ಸಂಪನ್ಮೂಲದ ಮಟ್ಟವನ್ನು ಏರಿಸತಕ್ಕಂಥ ಯೋಜನೆ 10 ಜಿಲ್ಲೆಗಳಿಗೆ ಈಗಾಗಲೇ ಮಂಜೂರು ಮಾಡಿದ್ದಾರೆ. ಈಗಾಗಲೇ 10 ಕೋಟಿ ರೂಪಾಯಿಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ನೂರಕ್ಕೆ ನೂರು ಪಾಲು ಕೊಡುತ್ತಿದ್ದಾರೆ. ಅದಕ್ಕಾಗಿ ನಾವು ಕಟ್ಟುನಿಟ್ಟಾಗಿ ಟಿ.ಸಿ.ಹೆಚ್.. ಕೊಡುವುದಿಲ್ಲ. ಬಿ.ಎಡ್.. ಕೊಡುವುದಿಲ್ಲ ಮತ್ತೆ ಯಾವುದೇ ಇನ್‌ಟೇಕ್ ಜಾಸ್ತಿ ಮಾಡುವುದಿಲ್ಲವೆಂದು ಹೇಳಿ ಅದು ಐಎಂಎಫ್ ಕಂಡೀಷನ್ ತರಹ ಇರಬೇಕೆಂದು ಕೇಂದ್ರ ಸರ್ಕಾರದವರು ಈ ಕಂಡೀಷನ್ಸ್ ಹಾಕಿದ್ದಾರೆ. ನೀವು ಟಿ.ಸಿ.ಹೆಚ್. ಮಾಡಿದರೆ, ಬಿ.ಎಡ್. ಕಾಲೇಜುಗಳನ್ನು ಜಾಸ್ತಿ ಮಾಡಿದರೆ. ಇನ್‌ಟೇಕ್‌ನ್ನು ಜಾಸ್ತಿ ಮಾಡಿದರೆ ಈ ಯೋಜನೆ ಕೊಡುವುದಕ್ಕಾಗುವುದಿಲ್ಲವೆಂದು ಕಟ್ಟುನಿಟ್ಟಾಗಿ ಹೇಳಿದ್ದಾರೆ. ಅದಕ್ಕಾಗಿ ನಾವು ಮಾಡುತ್ತಿದ್ದೇವೆ. ಇದು ಮಹಾರಾಷ್ಟ್ರ ಮತ್ತು ಇನ್ನೂ ಅನೇಕ ರಾಜ್ಯಗಳಲ್ಲಿ ಆಗಿದೆ. ನಮ್ಮ ರಾಜ್ಯದಲ್ಲಿ ಆಗದ ನಮ್ಮ ಶಿಕ್ಷಣದ ಮಟ್ಟ ಬಹಳ ಕುಸಿತ ಆಗಿದೆ. ಅವನತಿಯಲ್ಲಿದೆ ಎಂಬ ಅಭಿಪ್ರಾಯ ರಾಷ್ಟ್ರಮಟ್ಟದಲ್ಲೂ ಇದೆ. ರಾಜ್ಯಮಟ್ಟದಲ್ಲೂ ಇದೆ. ಇದನ್ನು ಏರಿಸತಕ್ಕಂಥ ದೃಷ್ಟಿಯಲ್ಲಿ ಈ ಯೋಜನೆಯನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ತಾಂಡಾಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸುವ ಬಗ್ಗೆ

1799. ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಹಾಪುರ ತಾಲ್ಲೂಕಿನ ಎಷ್ಟು ತಾಂಡಾಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಮತ್ತು ಇನ್ನು ಎಷ್ಟು ತಾಂಡಾಗಳಿಗೆ ಮಂಜೂರು ಮಾಡಬೇಕಾಗಿದೆ ?

ಆ) ಉಳಿದ ತಾಂಡಾಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಇನ್ನೂ ಎಷ್ಟು ಸಮಯ ಬೇಕಾಗಬಹುದು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಶಹಪುರ ತಾಲ್ಲೂಕಿನಲ್ಲಿ ಫೆಬ್ರುವರಿ 1992ರ ಅಂತ್ಯದವರೆಗೆ 36 ತಾಂಡಾಗಳನ್ನು ವಿದ್ಯುದ್ಧೀಕರಣ ಮಾಡಲಾಗಿದೆ ಮತ್ತು ಬಾಕಿ ಉಳಿದಿರುವ ತಾಂಡಾಗಳ ಸಂಖ್ಯೆ : 21.

ಆ) ಉಳಿದ 21 ತಾಂಡಾಗಳನ್ನು ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ವಿದ್ಯುದ್ಧೀಕರಣ ಮಾಡಲಾಗುವುದು.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್ : ಮಾನ್ಯ ಅಧ್ಯಕ್ಷರೆ. ಶಹಾಪುರ ತಾಲ್ಲೂಕಿನಲ್ಲಿ ಸುಮಾರು 36 ತಾಂಡಗಳಿದ್ದು ಅದರಲ್ಲಿ ಎಲೆಕ್ಟ್ರಿಸಿಟಿ ಆಗತಕ್ಕಂಥ ತಾಂಡಗಳು ಇನ್ನೂ 21 ಇವೆಯೆಂದು ಹೇಳಿದ್ದಾರೆ. ಈ ತಾಂಡಗಳಿಗೆ ಹಂತ ಹಂತವಾಗಿ ಎಲೆಕ್ಟ್ರಿಫಿಕೇಷನ್ ಮಾಡಿಕೊಡುತ್ತೇವೆ ಎನ್ನತಕ್ಕ ಉತ್ತರ ಕೊಟ್ಟಿದ್ದಾರೆ. ಸುಮಾರು 40-42 ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದರೂ ಕೂಡಾ ಇನ್ನೂ ಈ ತಾಂಡಗಳಿಗೆ ವಿದ್ಯುತ್ ಒದಗಿಸದೇ ಹೋದರೆ ಅಲ್ಲಿಯ ಜನಕ್ಕೆ ಬಹಳ ತೊಂದರೆಯಾಗುತ್ತದೆ. ಅದಕ್ಕಾಗಿ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಹೈದರಾಬಾದ್ ಅಭಿವೃದ್ಧಿ ಮಂಡಳಿ ಕಾಮಗಾರಿಗಳಲ್ಲಿ ಈ ತಾಂಡಗಳನ್ನು ಸೇರಿಸಿ ಇದೇ ವರ್ಷ ಟೈಮ್ ಬೌಂಡ್ ಪ್ರೋಗ್ರಾಮ್ ಎಂದು ತಿಳಿದುಕೊಂಡು ಈ ಕಾರ್ಯಕ್ರಮವನ್ನು ಅದರೊಳಗೆ ಸೇರಿಸಿ ಮಾಡಬೇಕೆಂದು ತಮ್ಮ ಮುಖೇನ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ : ಸರ್ಕಾರ ಹಣ ಜಾಸ್ತಿ ಒದಗಿಸಿದರೆ ಆದನ್ನು ಪ್ರಯತ್ನ ಮಾಡಿಕೊಡಿಸುತ್ತೇನೆ.

ಶ್ರೀ ಬಾಬುರಾವ್ ಚೌವಾಣ್ : ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಮಂತ್ರಿಯವರು ಹಂತ ಹಂತವಾಗಿ ತಾಂಡಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಮಾನ್ಯ ಮಿತ್ರರಾದ ಶಿವಶೇಖರಪ್ಪನವರಿಗೆ ಹೇಳಿದರು. ಅವರು ಹೇಳಿದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಹಂತ ಹಂತ ಎಂದರೆ ಎಷ್ಟು ವರ್ಷ, ಒಂದು ವರ್ಷನಾ? ಎರಡು ವರ್ಷವಾ. ಮೂರು ವರ್ಷನಾ? 5 ವರ್ಷನಾ. ಡಿಮಾಕ್ರಸಿ ಬಂದು ಸುಮಾರು ಇಷ್ಟು ವರ್ಷಗಳಾದರೂ ಇನ್ನೂ ನಾವು ಕತ್ತಲಲ್ಲೇ ಇದ್ದೇವೆ. ನಿಜವಾಗಿ ಹೇಳಬೇಕಾದರೆ, ಮಾನ್ಯ ಮಂತ್ರಿಗಳು ಬಹುಶಃ ಬೆಳಕಿನಲ್ಲಿ ಜನ್ಮ ತಾಳಿರಬೇಕು. ನಾನು ನಿಜವಾಗಿ ಹೇಳುತ್ತೇನೆ ನಾನು ಕತ್ತಲಲ್ಲೇ ಹುಟ್ಟಿದ್ದೇನೆ. ಅದು ಏಕೆ ಹೇಳುತ್ತೇನೆಂದರೆ, ಲಂಬಾಣಿ ಜನರು ಕತ್ತಲಲ್ಲೇ ಊಟ ಮಾಡುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ನಡೆಯುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ವಾಸ ಮಾಡುತ್ತಾರೆ. ಲಂಬಾಣಿ ಜನರು ಕತ್ತಲಲ್ಲೇ ಅಡಿಗೆ ಮಾಡಿ ಊಟ ಮಾಡುತ್ತಾರೆ. ಲಂಬಾಣಿ ಹೆಂಗಸರಿಗೆ ಹೆರಿಗೆ ಆಗಬೇಕಾದರೆ ಕತ್ತಲಲ್ಲೇ ಆಗುತ್ತದೆ. ಇಂಥಾ ಜನಗಳನ್ನು ಬೆಳಕಿಗೆ ತರಬೇಕಾದರೆ ಇನ್ನೂ ಹಂತ ಹಂತವಾಗಿ ಮಾಡುತ್ತೇವೆಂದು ಹೇಳಿದರೆ ಇದು ಬಹಳ ವಿಷಾದಕರವಾದುದು. ತಾವು ಹಂತ ಹಂತ ಎಂದು ಹೇಳುವ ಬದಲಾಗಿ 93ನೇ ಇಸವಿಯೊಳಗೆ ಎಲ್ಲಾ ಮಾಡಿಕೊಡುತ್ತೇವೆಂದು ಹೇಳಿ.

ಶ್ರೀ ಎಂ. ಮಹದೇವ್ : ಒಂದು ನಿಮಿಷ. ಸೂರ್ಯೋದಯ ಆಗುವತನಕ ಕತ್ತಲಲ್ಲೇ ಇರಬೇಕಾಗುತ್ತದೆ.

ಶ್ರೀ ಬಾಬುರಾವ್ ಚೌಹಾನ್ : ನಾವು ಕತ್ತಲಲ್ಲಿ ಇದ್ದು ಸಾಕಾಗಿದೆ. ಅದನ್ನು ಹಂತ ಹಂತ ಎಂದು ಹೇಳುವುದನ್ನು ತಾವು ತೆಗೆದುಹಾಕಿ 94ರ ಒಳಗೆ. ಇನ್ನು ಒಂದು ವರ್ಷದ ಒಳಗಡೆ ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಎಲ್ಲಾ ತಾಂಡಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡಿಕೊಡುತ್ತೇವೆಂದು ತಾವು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಂ. ರಾಮಪ್ಪ : ಅಧ್ಯಕ್ಷರೆ, ಹಂತ ಹಂತವಾಗಿ ಎಂದು ಏಕೆ ಹೇಳಿದ್ದೇನೆಂದರೆ, ಹಣದ ವಿಚಾರವನ್ನು ನೋಡಿಕೊಂಡು ನಾವು ಮಾಡಬೇಕಾಗುತ್ತದೆ. ಒಂದು ವರ್ಷದಲ್ಲಿ ಎರಡು ವರ್ಷದಲ್ಲಿ ಮಾಡಬೇಕೆಂದು ನಮಗೂ ಇಚ್ಛೆ ಇದೆ. ಆದರೆ, ಹಣದ ಪರಿಸ್ಥಿತಿ ನೋಡಿಕೊಂಡು ಬೇಗ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾನ್ : ನಾನು ಹೇಳಿದ ಕಾರ್ಯಕ್ಕೆ ಜಾಸ್ತಿ ಹಣವೇನೂ ಬೇಕಾಗಿಲ್ಲ. ತಾವುಗಳು ಮನಸ್ಸು ಮಾಡಿ ಅಗತ್ಯವಿರುವಂಥ ಕೆಲಸಕಾರ್ಯಗಳನ್ನು ಕೈಗೊಂಡು ತಾಂಡಾಗಳಿಗೆ ಲೈಟ್ ಕೊಡುವ ಕೆಲಸವನ್ನು ಮಾಡುತ್ತೇವೆ ಎಂಬ ಬಗ್ಗೆ ಆಶ್ವಾಸನೆಯನ್ನು ಕೊಡಬೇಕು. ಇಷ್ಟು ಸಮಯದೊಳಗಾಗಿ ಎಂದಾದರೂ ಹೇಳಬಹುದಲ್ಲವೇ ?

ಉಪಾಧ್ಯಕ್ಷರು : ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಇಷ್ಟೇ ಸಮಯವಲ್ಲಿ ಮಾಡಿಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ದಯಮಾಡಿ ತಾವು ಕುಳಿತುಕೊಳ್ಳಬೇಕು. ಇನ್ನು ಶ್ರೀ ಕೆ. ಹರ್ಷಕುಮಾರ ಗೌಡ ಅವರ ಪ್ರಶ್ನೆಯು ಪಶುಸಂಗೋಪನ ಇಲಾಖೆಗೆ ವರ್ಗವಾಗಿದೆ. ಇದನ್ನು ಮುಂದೆ ತೆಗೆದುಕೊಳ್ಳೋಣ.